

ನಾವು ಯಾರಿಗೇನು ಕಡಿಮೆ? ಅಂಗವಿಕಲ ಮಕ್ಕಳ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳ ಡಿಸ್ಕಸ್ ಎಸೆಯುವ ಸಾಹಸ.

ಭಾರತದ ಹಿಮೋಫೀಲಿಯಾ ರೋಗಿಗಳು ಚಿಕಿತ್ಸೆ ಇಲ್ಲದೆ ನರಳಬಾರದು ಎಂಬ ಆಶಯದೊಂದಿಗೆ ತನ್ನ ಸೇವೆಯನ್ನು ಭಾರತದ ಬೇರೆ ರಾಜ್ಯಗಳಿಗೂ ವಿಸ್ತರಿಸಬೇಕೆಂಬ ಆಸೆ ಇಟ್ಟುಕೊಂಡಿದೆ. ರಾಜ್ಯದ ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಈಗ ಹಿಮೋಫೀಲಿಯಾ ರೋಗಕ್ಕೆ ಉಚಿತ ಚಿಕಿತ್ಸೆ ದೊರಕುತ್ತಿದೆ. ಆದರೆ, ಸರ್ಕಾರ ಹಿಮೋಫೀಲಿಯಾ ರೋಗಿಗಳಿಗೆ ಚಿಕಿತ್ಸೆ ದೊರಕಿಸಿಕೊಟ್ಟದ್ದಕ್ಕಿಂತ ಅನೇಕ ವರ್ಷಗಳ ಹಿಂದೆಯೇ ಹನಗವಾಡಿ ಮತ್ತು ಗೆಳೆಯರು ಆ ಕುರಿತು ಕೆಲಸ ಮಾಡಿದ್ದನ್ನು ಇಲ್ಲಿ ಸ್ಮರಿಸಲೇಬೇಕು. ದೇಶಾದ್ಯಂತ ಹಿಮೋಫೀಲಿಯಾ ರೋಗಿಗಳಿಗೆ ಚಿಕಿತ್ಸೆ ದೊರಕುವ ವ್ಯವಸ್ಥೆಯನ್ನು ಪ್ರತಿ ರಾಜ್ಯ ಸರ್ಕಾರವು ಮಾಡಿದೆ. ಹಿಮೋಫೀಲಿಯಾ ರೋಗಿಗಳಿಗೆ ಹೆಚ್ಚಿನ ನೆರವು ನೀಡಲು ನಮ್ಮ ರಾಜ್ಯದಲ್ಲಿ ಬೆಂಗಳೂರು, ಬೀದರ್, ಮಣಿಪಾಲ, ಹುಬ್ಬಳ್ಳಿ ಮತ್ತು ಮೈಸೂರು ನಗರಗಳಲ್ಲಿ ಹಿಮೋಫೀಲಿಯ ರೋಗಿಗಳ ನೆರವಿನ ಕೇಂದ್ರಗಳಿವೆ.

ದಾವಣಗೆರೆಯಲ್ಲಿರುವ ಆಸ್ಪತ್ರೆಯಲ್ಲಿ ಫಿಸಿಯೊಥೆರಪಿ, ರಕ್ತದ ಘಟಕಗಳನ್ನು ಬೇರ್ಪಡಿಸುವ ವ್ಯವಸ್ಥೆ ಮತ್ತು ಧೈರ್ಯ ಹೇಳಿ ಆಪ್ತ ಸಮಾಲೋಚನೆ ನಡೆಸುವ ಕೌನ್ಸೆಲಿಂಗ್ ವ್ಯವಸ್ಥೆಯು ಇದೆ. ರೋಗಿಗಳು ರೋಗದ ಬಗೆಗೆ ವಿಸ್ತೃತ ತಿಳವಳಿಕೆ ಪಡೆಯಲು ಗ್ರಂಥಾಲಯವಿದ್ದು, ತರಬೇತಿಗಾಗಿ ಸುಸಜ್ಜಿತ ಕೋಣೆಯು ಲಭ್ಯವಿದೆ. ಈಗಾಗಲೇ 900ಕ್ಕೂ ಹೆಚ್ಚು ರೋಗಿಗಳ ಚಿಕಿತ್ಸೆ ನಡೆಯುತ್ತಿದ್ದು, ಪ್ರತಿದಿನ ಕನಿಷ್ಠ ನಾಲ್ಕು ಹೊಸ ರೋಗಿಗಳು ಬರುತ್ತಾರೆ ಎಂಬ ಮಾಹಿತಿ ಇದೆ. ರೋಗದ ಬಗೆಗೆ ಸಾಕಷ್ಟು ತಿಳವಳಿಕೆ ಇಲ್ಲದಿರುವುದರಿಂದ ಬಹು ಸಂಖ್ಯೆಯ ರೋಗಿಗಳ ಗುರುತಿಸುವಿಕೆ ಇನ್ನೂ ಸಾಧ್ಯವಾಗಿಲ್ಲ ಎನ್ನುವ ಡಾ. ಸುರೇಶ ಹನಗವಾಡಿಯವರು, 'ಚಿಕಿತ್ಸೆಗೆ ತುಂಬಾ ವೆಚ್ಚ ತಗಲುತ್ತದೆ ಎಂಬ ಕಾರಣಕ್ಕೆ ಜನ ತಮಗೆ ಕಾಯಿಲೆ ಎಂದು ಹೇಳಿಕೊಳ್ಳಲು ಹಿಂಜರಿಯುತ್ತಾರೆ' ಎಂದು ನೊಂದುಕೊಳ್ಳುತ್ತಾರೆ.

ಕಳೆದ ಐದು ವರ್ಷಗಳ ಕೆಳಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿಮೋಫೀಲಿಯಾ ಚಿಕಿತ್ಸೆಗೆ ಬೇಕಾದ ಔಷಧಗಳು ಸಿಗುತ್ತಿರಲಿಲ್ಲ. ಹಿಮೋಫೀಲಿಯಾ ರೋಗಿಯೊಬ್ಬನಿಗೆ ಚಿಕಿತ್ಸೆಗೆ ವರ್ಷಕ್ಕೆ 2 ಲಕ್ಷ ರೂಪಾಯಿಗಳ ಅವಶ್ಯಕತೆ ಇರುತ್ತದೆ. ದೇಹದ ಹೊರಗಿನ ಗಾಯ ಅಥವಾ ಒಳಗಿನ ಗಾಯಗಳಿಂದ ಉಂಟಾಗುವ ರಕ್ತಸ್ರಾವವನ್ನು ತಡೆಯಲು ಫ್ಯಾಕ್ಟರ್ 8, 9 ಅಥವಾ 11 ನೀಡಬೇಕಾಗುತ್ತದೆ. ಒಮ್ಮೆ ರಕ್ತ ಸೋರಲು ಶುರುವಾದರೆ ತಡೆಯಲು ಫ್ಯಾಕ್ಟರ್‌ಗಳಿರುವ ರಕ್ತದ ಮರುಪೂರಣ ಮಾಡಬೇಕಾಗುತ್ತದೆ. ಒಂದು ರಕ್ತಪೂರಣ ಚಿಕಿತ್ಸೆಗೆ 10,000 ರೂಪಾಯಿ ಬೇಕಾಗುತ್ತದೆ. ರಕ್ತ ಪೂರೈಸಿದ ನಂತರ ಚಿಕಿತ್ಸೆಯ ಭಾಗವಾಗಿ ನಡೆಸಬೇಕಾದ ಫಿಸಿಯೊಥೆರಪಿ, ಕೌನ್ಸೆಲಿಂಗ್, ರೋಗ ನಿರ್ವಹಣೆಯ ಬಗ್ಗೆ ತರಬೇತಿಗಳನ್ನು ನೀಡಬೇಕಾಗುತ್ತದೆ.

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ರಾಜ್ಯಗಳಿಂದ ರೋಗಿಗಳು ದಾವಣಗೆರೆಗೆ ಚಿಕಿತ್ಸೆಗೆ ಬರುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಬರಲು ದುಡ್ಡಿಲ್ಲದೆ ಒದ್ದಾಡುವ ಹಿಮೋಫೀಲಿಯಾ ರೋಗಿಗಳ ನೆರವಿಗೆ ಮನೆ ಬಾಗಿಲಿಗೇ ಚಿಕಿತ್ಸೆಯನ್ನು ಕೊಂಡೊಯ್ಯಲು ಸಂಚಾರಿ ಘಟಕವನ್ನು ಇದೀಗ ಸಿದ್ಧಪಡಿಸಲಾಗಿದೆ.

## ಅಮೃತ ಗಳಿಗೆ

1999ರಲ್ಲಿ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯನ್ನಾಗಿ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಆಹ್ವಾನಿಸಲು ಹೋಗಿದ್ದ ಡಾ. ಸುರೇಶ್ ಅವರಿಗೆ ಆಶ್ಚರ್ಯ ಕಾದಿತ್ತು. ಭೇಟಿಯ ಸಮಯದಲ್ಲಿ ತಮಗಿರುವ ಹಿಮೋಫೀಲಿಯ ಕಾಯಿಲೆ ಮತ್ತು ರಾಜ್ಯ ಮತ್ತು ದೇಶದಲ್ಲಿ ಅದರಿಂದ ಬಳಲುತ್ತಿರುವವರ ಸಂಖ್ಯೆ ಮತ್ತು ಅವರು ಪಡುತ್ತಿರುವ ಬವಣೆಯ ಕುರಿತು ಎಸ್.ಪಿ.ಬಿ. ಅವರ ಬಳಿ ಹೇಳಿದಾಗ 'ಡಾಕ್ಟ್ರೇ, ನಾನು ನಿಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಅತಿಥಿಯಾಗಿ ಬರುವುದರ ಬದಲು ಹಿಮೋಫೀಲಿಯಾ ರೋಗಿಗಳಿಗೆ ಅನುಕೂಲವಾಗುವಂತಹ ಕೆಲಸ ಮಾಡಲು ಬಯಸುತ್ತೇನೆ' ಎಂದರು. ಮಾತಿನಂತೆ ದಾವಣಗೆರೆಗೆ ಬಂದು, ಹಿಮೋಫೀಲಿಯಾ ರೋಗಿಗಳಿಗೆ ಬೇಕಾಗುವ ಔಷಧ ಕೊಳ್ಳಲು ತಮ್ಮ 'ಮ್ಯೂಸಿಕಲ್ ನೈಟ್' ಮೂಲಕ ಬಂಡವಾಳ ರೂಪಿಸಿಕೊಟ್ಟರು. ಬರೋಬ್ಬರಿ 21 ವರ್ಷಗಳ ಕಾಲ ಹಿಮೋಫೀಲಿಯಾ ರೋಗಿಗಳ ನೆರವಿಗೆ ನಿಂತರು. ದಾವಣಗೆರೆಯ ಶ್ರೀಮತಿ ಗಿರಿಜಮ್ಮನವರು ಕರ್ನಾಟಕ ಹಿಮೋಫೀಲಿಯಾ ಸೊಸೈಟಿಯ ಆಸ್ಪತ್ರೆ ನಿರ್ಮಿಸಲು ಬೇಕಾದ 14 ಸಾವಿರ ಚದರ ಅಡಿ ವಿಸ್ತೀರ್ಣದ, ದಾವಣಗೆರೆ ನಗರ ಅಭಿವೃದ್ಧಿ ಪ್ರಾಧಿಕಾರದ ನಿವೇಶನಕ್ಕೆ ತಗಲುವ ವೆಚ್ಚ ಭರಿಸಿದರು.

2022ರಲ್ಲಿ ಕೋವಿಡ್ ಸೋಂಕಿನಿಂದ ಕೊನೆಯುಸಿರೆಳೆಯುವವರೆಗೂ ಕರ್ನಾಟಕ ಹಿಮೋಫೀಲಿಯಾ ಸೊಸೈಟಿಯ ಮಹಾದಾನಿಗಳಾಗಿದ್ದ ಎಸ್.ಪಿ.ಬಿ. ಅವರು, ಹನಗವಾಡಿ ಅವರ ಪ್ರಯತ್ನಕ್ಕೆ ಆನೆಯ ಬಲವನ್ನು ತಂದುಕೊಟ್ಟರು. ದಾವಣಗೆರೆಯ ಜೆಜೆಎಂ ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದ ಪ್ರೊಫೆಸರ್ ಆಗಿರುವ ಸುರೇಶ ಹನಗವಾಡಿ, 'ಹಿಮೋಫೀಲಿಯಾ ಫೆಡರೇಷನ್ ಆಫ್ ಇಂಡಿಯಾ' ಅಧ್ಯಕ್ಷರೂ ಆಗಿದ್ದರು. ಪ್ರಸ್ತುತ ರಾಜ್ಯ ಸರ್ಕಾರದ ರಾಜ್ಯ ರಕ್ತನಿಧಿಯ ತಾಂತ್ರಿಕ ಸಮಿತಿಯ ಸದಸ್ಯ ಹಾಗೂ ವಿಕಲಾಂಗರ ಹಕ್ಕುಗಳ ಆಯುಕ್ತರ ಸಲಹಾ ಸಮಿತಿಯ ಸದಸ್ಯರು. ಹಿಮೋಫೀಲಿಯಾ ರೋಗಿಗಳ ನಿರಂತರ ಸೇವೆಯನ್ನು ಗುರುತಿಸಿ ಕೇಂದ್ರ ಸರ್ಕಾರವು ಸುರೇಶ್ ಹನಗವಾಡಿ ಅವರಿಗೆ 2024ನೇ ಸಾಲಿನ ವಿಕಲಚೇತನರಿಗೆ ನೀಡುವ ರಾಷ್ಟ್ರೀಯ ಪ್ರಶಸ್ತಿಯನ್ನು ಘೋಷಿಸಿದೆ.

## ಏನಿದು ಹಿಮೋಫೀಲಿಯಾ ರೋಗ?

ದೇಹಕ್ಕೆ ಗಾಯಗಳಾದಾಗ ರಕ್ತ ಸುರಿಯುವುದನ್ನು



ಅಂಗವೈಕಲ್ಯಕ್ಕೆ ಸಡ್ಡು ಹೊಡೆದು ಕಾರವಾರದಲ್ಲಿ ಜೆರಾಕ್ಸ್ ಮಳಿಗೆ ನಡೆಸುತ್ತಿರುವ ಕಲ್ಪನಾ ನಾಯ್ಕ